ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಸಂಡೂರು.

**OS. No. 30/ 2021 D.W. 01**

ದಿನಾಂಕ **16-02-2023** ರಂದು ಪ್ರಮಾಣ ವಚನ ಮಾಡಿಸಲಾಯಿತು.

**ಮದ್ಯಂತರ ಆದೇಶದ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆ**
**ಶ್ರೀ ಕೆ ಎಂ ವಿ ವಕೀಲರಿಂದ**

* * * *

ಸಾಕ್ಷಿಯು ದೃಢೀಕೃತ ನೋಂದಾಯಿತ ಕ್ರಯ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಎ ಎಸ್ ಪಿ ವಕೀಲರಿಂದ**

* * * *

ದಾವಾ ಸ್ವತ್ತಿನ ಸರ್ವೆ ನಂಬರ 512/1 ಎಂದರೆ ಸಾಕ್ಷಿಯು 512 ಅಗಿರುತ್ತದೆ ಆದರೆ ಇತ್ತಿಚಿಗೆ ಸರ್ವೆ ಮಾಡಿದ ಕಾರಣ 512/1 ಎಂದು ನಮೂದು ಮಾಡಿರುತ್ತಾರೆ. ನಿಡಿ 2 ದಾವಾ ಸ್ವತ್ತಿಗೆ ಸಂಬಂದಪಟ್ಟ ದಾಖಲೆ ಆಗಿರುವುದಿಲ್ಲ ಆದರೆ ಆದು ಸದರಿ ದಾವಾ ಸ್ವತ್ತಿನ ಪಕ್ಕದ ಜಮೀನಿನ ಆಸ್ತಿಯಾಗಿರುತ್ತದೆ. ದಾವಾ ಸ್ವತ್ತಿನ ಚೆಕ್ ಬಂದಿ ನಿಡಿ 1 ಮತ್ತು 2 ರಲ್ಲಿ ನಮೂದು ಆಗಿರುವುದಿಲ್ಲ ಎಂದರೆ ಸರಿ. ನಿಡಿ 2 ರ ಆಸ್ತಿ ದಾವಾ ಸ್ವತ್ತಿನ ಪಕ್ಕದಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ಒಂದೇ ಸರ್ವೆ ನಂಬರನಲ್ಲಿ ಜಮೀನುಗಳು ಅಕ್ಕ ಪಕ್ಕ ಇದ್ದರು ಸಹ ಒಂದು ಜಮೀನಿನ ಮೌಲ್ಯ ಮತ್ತೊಂದು ಜಮೀದಿನ ಮೌಲ್ಯಕ್ಕಿಂತ ಹೆಚ್ಚಿಗೆ ಇರುತ್ತದೆ ಎಂದರೆ ಸರಿ. ನಿಡಿ 2 ರ ಸ್ವತ್ತು ದಾವಾ ಸ್ವತ್ತಿನ ಸರ್ವೆ ನಂಬರ ಮತ್ತು ದಾವಾ ಸ್ವತ್ತಿನ ಸರ್ವೆ ನಂಬರ ಒಂದೇ ಅಗಿರುತ್ತದೆ. ನಿಡಿ 2 ರಲ್ಲಿರುವ ಸ್ವತ್ತನ್ನು ವಿದ್ಯತ್ಯ ತಯಾರಿಕಾ ಘಟಕ್ಕೆ ನೀಡಿರುತ್ತಾರೆ ಎಂದರೆ ಸರಿ. ಎಲ್ಲಿ ಗಾಳಿ ವೇಗ ಜಾಸ್ತಿ ಇರುತ್ತದೆ ಅಲ್ಲಿ ಹೆಚ್ಚಿಗೆ ದುಡ್ಡನ್ನು ಕೊಟ್ಟ ಜಮೀನನ್ನು ಖರೀದಿ ಮಾಡುತ್ತಾರೆ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾ.ದಂ., ಸಂಡೂರು.